


ರಾಧಾ ಎರಡು ತಿಂಗಳುಗಟ್ಟಲೆ ದೂರದ ಮುಹೂರ್ತ ಆಯ್ದುಕೊಂಡಿದ್ದು ವೇಣು ಬದಲಾಗಬಹುದೆಂದೋ, ಮದುವೆ ನಿಲ್ಲಿಸಬಹುದೆಂದೋ ಎಂಬ ದೂರದ ಆಸೆಯಿಂದ ಇರಬೇಕು ಎಂದು ಶಂಕ್ರಣ್ಣನಿಗೆ ಒಮ್ಮೊಮ್ಮೆ ಅನ್ನಿಸಿದ್ದುಂಟು. ತಾನಾದರೂ ಬುದ್ಧಿ ಹೇಳೋಣವೆಂದರೆ ಮಾತಿಗೆ ಸಿಗದಂತೆ ಜಾರಿ ಹೋಗುತ್ತಾನಲ್ಲ ಹುಡುಗ, ಯಾರಿಗೆ ಅಂತ ಹೇಳುವುದು...

ಶಂಕ್ರಣ್ಣನ ಮನೆಯಿಂದ ಕಾಡ್ಮನೆ ಎಷ್ಟು ದೂರವೂ ಅಲ್ಲ, ರಾಧಾಳ ಸ್ಕೂಟಿಯಿಂದ ಎರಡು ನಿಮಿಷ, ಕಾಲ್ನಡಿಗೆಯಲ್ಲಾದರೆ ಐದು ನಿಮಿಷ. ಭಾರವಾದ ಹೆಜ್ಜೆ ಇಡುತ್ತಿದ್ದರಿಂದ ಇಂದು ಹತ್ತು ನಿಮಿಷ.

ಕಾಡ್ಮನೆಯ ದಣಪೆಯಿಂದಾಚೆಗೂ ಕೇಸರಿಯ ಪರಿಮಳ, ಮಂಡೆ ಕಸದ ಸಕ್ಕರೆಯ ಎಳೆ ಪಾಕದಲ್ಲಿ ತಯಾರಿಸಿದ್ದಿರಬಹುದಾದ ಲಾಡುವಿನ ಘಮ ಹಬ್ಬಿತ್ತು. ಭರ್ಜರಿಯಾಗಿ ಸಿಂಗರಿಸಿದ ಮಂಟಪದೊಳಗೆ ಶೇಖರ ಕುಳಿತಿದ್ದ ಬಾಸಿಂಗ ಕಟ್ಟಿಕೊಂಡು. ಗಿರಿಜತ್ತಿಗೆಗೆ ಹೊಟ್ಟೆಯಲ್ಲಿ ಚುರ್ರ್ ಅಂತು. ಎಲ್ಲವೂ ಸರಿಯಿದ್ದಿದ್ದರೆ ಇಂದು ವೇಣು ಈ ಮಂಟಪದಲ್ಲಿ ಕುಳಿತಿರುತ್ತಿದ್ದ. ಗಿರಿಜತ್ತಿಗೆ, ಶಂಕ್ರಣ್ಣನವರು